ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು-3ರವರ ಕಛೇರಿ
ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ
ಎನ್.ಆರ್.ಚೌಕ, ಬೆಂಗಳೂರು-02
ದಿನಾಂಕ:11.06.2020

ಆಡಳಿತಾತ್ಮಕ ಅನುಮೋದನೆ

ವಿಷಯ:-" Allied works for Sweep smart Project& other Repairs Works for DWCC centre in ward no 11" ಕಾಮಗಾರಿಯ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿ ಹೊರಡಿಸುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಆದೇಶ ಸಂಖ್ಯೆ: ನಅಇ 10 ಎಂಎನ್‌ವೈ 2018, ದಿನಾಂಕ:03.05.2019.

2. M/s. SweepSmart Waste management Pvt.Ltd., ಹಾಗೂ ಬಿಬಿಎಂಪಿ ಇಲಾಖೆಯೊಂದಿಗೆ ದಿನಾಂಕ:31.05.2019 ನಡೆದ ಪರಸ್ಪರ ಒಡಂಬಡಿಕೆ ಕರಾರು.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಂಡಿಕೆ(100), ದಿನಾಂಕ:30.05.2020 ರ ಆದೇಶ.
4. ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆಯ ಆದೇಶ ಸಂಖ್ಯೆ:ಬಿ12(1)ಪಿ.ಆರ್ /394/2019-20, ದಿನಾಂಕ:25.09.2019.
5. ಪಿ-0274, ಜಾಬ್ ಸಂಖ್ಯೆ: 011-21-000001.

>>>>>>>**********<<<<<<<<<<

ಪ್ರಸ್ತಾವನೆ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡಲು 10 ಒಣತ್ಯಾಜ್ಯ ಸಂಗ್ರಹಣಾ ಕೇಂದ್ರಗಳ ಉನ್ನತೀಕರಣ ಕಾಮಗಾರಿಯನ್ನು ನಿರ್ವಹಿಸಲು ಉಲ್ಲೇಖ (1)ರ ಸರ್ಕಾರದ ಆದೇಶದಂತೆ M/s.SweepSmart Waste management Pvt.Ltd., ಸಂಸ್ಥೆಯವರಿಗೆ ರೂ.3,35,00,000/-ಗಳಿಗೆ ಉಲ್ಲೇಖ(2)ರಂತೆ ದಿನಾಂಕ:31.05.2019 ರಂದು ಪರಸ್ಪರ ಒಡಂಬಡಿಕೆ ಕರಾರು ಮಾಡಿಕೊಳ್ಳಲಾಗಿರುತ್ತದೆ. ಸದರಿ ರೂ.3,35,00,000/-ಗಳಲ್ಲಿ ರೂ.1,35,00,000/-ಗಳನ್ನು ಸಿವಿಲ್ ಕಾಮಗಾರಿಗಳಿಗೆ ಮೀಸಲಿರಿಸಲಾಗಿದ್ದು, **" Allied works for Sweep smart Project& other Repairs Works for DWCC centre in ward no 11"** ಕಾಮಗಾರಿಯನ್ನು ನಿರ್ವಹಿಸಲು ರೂ.18,40,000/-ಗಳಿಗೆ ಉಲ್ಲೇಖ(3)ರಂತೆ ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಉಲ್ಲೇಖ(4)ರ ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿ ಹೊರಡಿಸಲು ಅಧಿಕಾರ ಪ್ರತ್ಯಾಯೋಜಿಸಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆಡಳಿತಾತ್ಮಕ ಆದೇಶ ಪ್ರತಿಯನ್ನು ಹೊರಡಿಸಲಾಗಿದೆ.

Scanned by CamScanner

ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **"Allied works for Sweep smart Project& other Repairs Works for DWCC centre in ward no 11"** ಕಾಮಗಾರಿ ಅಂದಾಜು ಪಟ್ಟಿಯ **ರೂ.18.40 ಲಕ್ಷಗಳಿಗೆ(ರೂಪಾಯಿ ಹದಿನೆಂಟು ಲಕ್ಷದ ನಲವತ್ತು ಸಾವಿರಗಳು ಮಾತ್ರ)** ಆಡಳಿತಾತ್ಮಕ ಅನುಮೋದನೆ ನೀಡಿರುವ ಮೇರೆಗೆ ಉಲ್ಲೇಖ(4)ರ ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆಯಂತೆ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಆದೇಶ ಪ್ರತಿ ಹೊರಡಿಸಲಾಗಿದೆ.

ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿಯನ್ನು ಈ ಕಛೇರಿಯ ಆಡಳಿತಾತ್ಮಕ ಆದೇಶ ಪ್ರತಿ ದಾಖಲಾತಿ ವಹಿಯ **ಸಂಖ್ಯೆ:EE-3/(SWM)/AS/೦೪/2020-21** ರಂತೆ **ದಿನಾಂಕ:11.06.2020** ರಲ್ಲಿ ನೊಂದಾಯಿಸಲಾಗಿದೆ.

ಕಾರ್ಯಪಾಲಕ ಅಭಿಯಂತರರು–3 (ಘ.ತ್ಯಾ.ನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:–

1. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಅವಗಾಹನೆಗೆ
   ತರಲು ತಾಂತ್ರಿಕ ಸಹಾಯಕರು ರವರಿಗೆ ಸೂಕ್ತ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು, ಘ.ತ್ಯಾ.ನಿ ರವರ ಅವಗಾಹನೆಗಾಗಿ.
3. ಅಧೀಕ್ಷಕ ಅಭಿಯಂತರರು, ಘ.ತ್ಯಾ.ನಿ ರವರ ಅವಗಾಹನೆಗಾಗಿ.
4. ಕಛೇರಿ ಕಡತಕ್ಕೆ.

Scanned by CamScanner